**ಸಾಕ್ಷಿಗೆ ದಿನಾಂಕಃ 07.03.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎನ್. ಎಸ್. ವಕೀಲರಿಂದಃ**

ದಿ.13.05.2025 ರಂದು ಆಸ್ಪತ್ರೆಯಲ್ಲಿ ಹೇಳಿಕೆ ನೀಡಿರುತ್ತೇನೆ. ಆಗ ಸಮಯ 4.00 ಗಂಟೆ ಆಗಿರುತ್ತದೆ. ಮೊದಲು ತಲಕಾಡು ಪೋಲೀಸ್ ಠಾಣೆಗೆ ಹೋಗಿದ್ದು ನಂತರ ಆಸ್ಪತ್ರೆಗೆ ಹೋಗಿರುತ್ತೇವೆ. ನಾನು ಟಿ.ನರಸೀಪುರ ಆಸ್ಪತ್ರೆಯಲ್ಲಿ 3 ದಿನ ದಾಖಲಾಗಿದ್ದೆನು. ಆಸ್ಪತ್ರೆಗೆ ಬಂದಾಗ ಮಧ್ಯಾಹ್ನ 12.00 ಗಂಟೆ ಆಗಿತ್ತು. ಘಟನಾ ಸ್ಥಳವು ಆರೋಪಿಗೆ ಸೇರಿದ ಜಾಗ ಹಾಗೂ ಅವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಇದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಘಟನಾ ಸ್ಥಳದಲ್ಲಿ ಕಲ್ಲು, ಮುಳ್ಳು ಮತ್ತು ಗಾಜುಗಳು ಇದ್ದವು ಎಂದರೆ ಸರಿ. ಘಟನಾ ಸ್ಥಳಕ್ಕೆ ನಾನೊಬ್ಬನೇ ಹೋಗಿರುತ್ತೇನೆ. ನನ್ನೊಂದಿಗೆ ಘಟನಾ ಸ್ಥಳದಲ್ಲಿ ಬೇರೆ ಯಾರೂ ಇರಲಿಲ್ಲ. ಆರೋಪಿಗಳು ಘಟನೆಯ ಹಿಂದಿನ ದಿನ ನಮ್ಮಗಳ ವಿರುದ್ಧ ದೂರನ್ನು ಸಲ್ಲಿಸಿದ್ದರು. ನಾನುಮತ್ತು ಚಾ.ಸಾ.2 ರಿಂದ 6 ರವರ ಮೇಲೆ 1 ನೇ ಆರೋಪಿಯ ಮೇಲೆ ಹಲ್ಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಚಾ.ಸಾ.2 ರಿಂದ 6 ರವರು ನಮ್ಮ ಕುಟುಂಬದವರು ಎಂದರೆ ಸರಿ. ನಾವುಗಳೇ 1 ನೇ ಆರೋಪಿಗೆ ತಲೆಗೆ ದೊಣ್ಣೆಯಿಂದ ಹಾಗೂ ಗುದ್ದಲಿಯಿಂದ ಹೊಡೆದು ರಕ್ತಗಾಯಪಡಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ತಲೆ ಮತ್ತು ಮೂಗು, ಬಾಯಿಯಲ್ಲಿ ರಕ್ತ ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿಯು ಟಿ.ನರಸೀಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ದಿ.14.07.2025 ರಂದು ನಮ್ಮಗಳ ವಿರುದ್ಧ ಆರೋಪಿಗಳು ದೂರು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾವುಗಳು ರಾಜಕೀಯ ಒತ್ತಡವನ್ನು ಬಳಸಿ ಆರೋಪಿಗಳು ಸಲ್ಲಿಸಿದ ದೂರು ದಾಖಲು ಆಗದ ರೀತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಪ್ರಸ್ತುತ ನಾನು ಗ್ರಾಮ ಪಂಚಾಯಿತಿಯ ಸದಸ್ಯನಾಗಿರುತ್ತೇನೆ ಎಂದರೆ ಸರಿ. ಆರೋಪಿಗಳು ನನಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಮಹಜರ್ ಗೆ ಸಹಿ ಮಾಡಿದವರು ನನಗೆ ಗೊತ್ತು. ಘಟನಾ

ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಹಾಗೂ ನಿ.ಪಿ.2 ನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯು ಬಾಳೆಮಂಡಿಯಲ್ಲಿ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು)

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**

DW-1 present. Advocate for plaintiff cross examined, DW-1 fully.

Posted for further evidence of defendant if any by

**I Addl. Civil Judge and JMFC,**

**T.Narasipura**